ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು.**

ಸಂಖ್ಯೆ:ಸಿ5[1] ಅಧಿ.ಬಡ್ತಿ–25/2020–21 ದಿನಾಂಕ: 12–01–2021

## ಜ್ಞಾಪನ

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಥಮ ದರ್ಜೆ ಸಹಾಯಕರಿಗೆ ಅಧೀಕ್ಷಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿದ್ದು ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ: 1. ದಿನಾಂಕ: 02–01–2021 ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯ ನಡವಳಿ.

2. ಈ ಕಛೇರಿ ಸಮ ಸಂಖ್ಯೆಯ ಅಧಿಸೂಚನೆ ದಿನಾಂಕ: 02/01/2021.

*****

ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಪ್ರಥಮ ದರ್ಜೆ ಸಹಾಯಕರು/ಶೀಘ್ರಲಿಪಿಗಾರರಿಗೆ ಜ್ಯೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಅಧೀಕ್ಷಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲು ಉಲ್ಲೇಖ[1]ರ ಇಲಾಖಾ ಮುಂಬಡ್ತಿ ಸಭೆಯಲ್ಲಿ ನಿರ್ಣಯಿಸಲಾಗಿ ಹಾಗೂ ಉಲ್ಲೇಖ–2 ರ ಅಧಿಸೂಚನೆಯಂತೆ ಅಧೀಕ್ಷಕರ ಹುದ್ದೆಗೆ ವೇತನ ಶ್ರೇಣಿ ರೂ 37900–70850 ರಲ್ಲಿ ಬಡ್ತಿ ನೀಡಿ ಆದೇಶಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ–2 ರಂತೆ **ದಿನಾಂಕ: 12/01/2021 ರಂದು** ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ಸ್ಥಳ ಆಯ್ಕೆ ಪ್ರಕ್ರಿಯೆಯನ್ನು ಕೌನ್ಸಿಲಿಂಗ್ ಮೂಲಕ ನಡೆಸಲಾಗಿರುತ್ತದೆ. ಅದರಂತೆ ನೌಕರರು ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ವ ಇಚ್ಛೆಯಿಂದ ಆಯ್ಕೆ ಮಾಡಿಕೊಂಡಿರುವ ಸ್ಥಳವನ್ನು ಅವರ ಹೆಸರಿನ ಮುಂದೆ ನಮೂದಿಸಿರುವ ಬಡ್ತಿ ಹುದ್ದೆಯಲ್ಲಿ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

| ಕ್ರ.ಸಂ | ಪ್ರ.ದ.ಸ ಜ್ಯೇಷ್ಠತಾ ಸಂಖ್ಯೆ | ನೌಕರರ ಹೆಸರು, ಪದನಾಮ ಮತ್ತು ಕಛೇರಿ ವಿಳಾಸ ಶ್ರೀ/ಶ್ರೀಮತಿ | ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ಕಛೇರಿ ವಿಳಾಸ |
|---|---|---|---|
| 1 | 803 | ಲೋಕೇಶ್ ಕೆ ಹೆಚ್, ಪ್ರದಸ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಚಿಕ್ಕಬಳ್ಳಾಪುರ ಜಿಲ್ಲೆ (ಕೆ ಎನ್ ಬಸವರಾಜ್ ರವರ ಮುಂಬಡ್ತಿಯಿಂದ) |
| 2 | 804 | ರವೀಶ್ ಕೆ ಸಿ, ಪ್ರದಸ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು | ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ. (ಶ್ರೀ. ಎಂ ಎಸ್ ಶಂಕರನಾರಾಯಣ ರವರು ವಿತ್ತೀಯ ಕಾರ್ಯನೀತಿ ಸಂಸ್ಥೆಗೆ ನಿಯೋಜನೆ ಗೊಂಡಿರುವುದರಿಂದ ತೆರವಾದ ಹುದ್ದೆ) |
| 3 | 807 | ಸುರೇಶ್ ಜಿ, ಪ್ರದಸ, ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಚಾಮರಾಜನಗರ ಜಿಲ್ಲೆ (ವಾಸುದೇವಮೂರ್ತಿ ಇವರ ವಯೋನಿವೃತ್ತಿಯಿಂದ 01/06/2019) |
| 4 | 808 | ಎಂ. ಸುರೇಶ್ ಕುಮಾರ್, ಪ್ರ.ದ.ಸ, ಸರ್ಕಾರಿ ಬಾಲಕರ ಪ್ರೌಢ ಶಾಲೆ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ (ಎ ಕಲ್ಯಾಣ ಕುಮಾರ್ ರವರ ಬಡ್ತಿ ಹಿಂಬಡ್ತಿ ಗೊಳಿಸಿರುವುದರಿಂದ ಹುದ್ದೆ) |

| | | | |
|---|---|---|---|
| 5 | 810 | ಕಲ್ಪನ ಎನ್ ಆರ್, ಪ್ರದಸ, ಸರ್ಕಾರಿ ಪ್ರೌಢ ಶಾಲೆ, ಗುರುಪುರ, ಹುಣಸೂರು ತಾಲ್ಲೂಕು, ಮೈಸೂರು | ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಾಮರಾಜನಗರ ಜಿಲ್ಲೆ (ಸೌಭಾಗ್ಯಮ್ಮ ವರ್ಗಾವಣೆಯಿಂದ ತೆರವಾದ ಹುದ್ದೆ 17/7/2017) |
| 6 | 813 | ಜೆ. ಎಸ್. ಲೀನಾ, ಪ್ರದಸ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ, ಕೆ.ಜಿ.ಎಫ್ ತಾಲ್ಲೂಕು, ಕೋಲಾರ ಜಿಲ್ಲೆ (ದಿ:28/02/2019 ರಂದು ಶ್ರೀ ಶ್ರೀನಾಥ.ಕೆ ಇವರ ವರ್ಗಾವಣೆಯಿಂದ) |
| 7 | 814 | ಸತೀಶ್ ಕೆ ಎಲ್, ಪ್ರದಸ, ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ತೀರ್ಥಹಳ್ಳಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆ. (ಶಶಿಕಲ ಟಿ ಆರ್ ರವರ ವರ್ಗಾವಣೆಯಿಂದ ಹುದ್ದೆ) |
| 8 | 815 | ಮಲ್ಲಿಕಾರ್ಜುನ ಕೆ ವಿ, ಪ್ರದಸ, ಸರ್ಕಾರಿ ಪ್ರೌಢ ಶಾಲೆ, ಹಿರೆಎಮ್ಮಿಗನೂರು, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ನರಸಿಂಹರಾಜಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ (ರಾಜಣ್ಣ ಆರ್ ರವರ ವಯೋನಿವೃತ್ತಿ ಯಿಂದ ತೆರವಾದ ಹುದ್ದೆ ದಿ: 31/10/2020) |
| 9 | 817 | ಎಂ ಸಿ ಲೋಹಿತ್ ಕುಮಾರ್, ಪ್ರದಸ, ಸರ್ಕಾರಿ ಪ್ರೌಢ ಶಾಲೆ, ಜೋಳದಾಳ್, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ | ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ (ಲಕ್ಷ್ಮೀಶಬಾಬು ರವರ ಮಾನ್ಯ ಶಾಸಕರು ಅರಸೀಕೆರೆ ತಾಲ್ಲೂಕು ರವರಿಗೆ ಆಪ್ತ ಸಹಾಯಕರಾಗಿ ನಿಯೋಜನೆಯಿಂದ) |
| 10 | 818 | ಮೊಹಮದ್ ಷಹವರ್ ಖಾನ್, ಪ್ರದಸ, ಸರ್ಕಾರಿ ಪ್ರೌಢ ಶಾಲೆ, ಚಕ್ಕೆರೆ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಪಿ ಸಿ ಸೌಭಾಗ್ಯಮ್ಮ ರವರ ಬಡ್ತಿಯಿಂದ) |
| 11 | 823 | ರಾಧ ವಿ, ಪ್ರದಸ, ಕರ್ನಾಟಕ ಪಬ್ಲಿಕ್ ಶಾಲೆ, ಬಿ ಹೆಚ್ ರಸ್ತೆ, ಶಿವಮೊಗ್ಗ ಜಿಲ್ಲೆ | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಬೆಳ್ತಂಗಡಿ, ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಹೊಸದಾಗಿ ಮಂಜೂರಾದ ಹುದ್ದೆ) |
| 12 | 824 | ಟಿ ಎಸ್ ಗೌತಮಿ ರಜಪೂತ್, ಪ್ರದಸ, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಬೆಂಗಳೂರು | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ (ಎಂ.ಆರ್.ರವೀಂದ್ರ ರವರ ನಿವೃತ್ತಿಯಿಂದ ತೆರವಾಗಿರುವ ಹುದ್ದೆ) |
| 13 | 1038 | ಎಂ ಕೆ ಸುಮಂತ, ಪ್ರದಸ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಮೂಡಬಿದ್ರೆ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಲೆಡ್ವಿನ್ ಫರ್ನಾಂಡಿಸ್ ರವರ ಬಡ್ತಿಯಿಂದ ತೆರವಾದ ಹುದ್ದೆ) |
| 14 | 1069 | ರವೀಂದ್ರ, ಪ್ರದಸ, ಸಹ ನಿರ್ದೇಶಕರ ಕಛೇರಿ, ಮಧ್ಯಾಹ್ನ ಉಪಹಾರ ಯೋಜನೆ, ಕೆ ಜಿ ರಸ್ತೆ, ಬೆಂಗಳೂರು | ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ (ಹೊಸದಾಗಿ ಮಂಜೂರಾದ ಹುದ್ದೆ) |

ಸಂಬಂಧಿಸಿದ ಕಛೇರಿ ಮುಖ್ಯಸ್ಥರು ಈ ಕೆಳಕಂಡ ಷರತ್ತಿಗೊಳಪಟ್ಟು ಬಡ್ತಿಹೊಂದಿದ ನೌಕರರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಲು ಮತ್ತು ಬಡ್ತಿ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳಲು ಸೂಚಿಸಿದೆ.

ಷರತ್ತುಗಳು

*01.* ಮೇಲ್ಕಂಡ ಪ್ರಥಮ ದರ್ಜೆ ಸಹಾಯಕರು ಅಧೀಕ್ಷಕರ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಅಧೀಕ್ಷಕರ ಹುದ್ದೆಯಲ್ಲಿ ಕ.ನಾ.ಸೇ.ನಿಯಮ 42[ಬಿ] ಅನ್ವಯ ವೇತನ ನಿಗಧಿಗೆ ಅರ್ಹರಿರುತ್ತಾರೆ.

*02.* ಈ ನೌಕರರ ಮೇಲೆ ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ, ನ್ಯಾಯಾಂಗ ಪ್ರಕರಣ ಬಾಕಿ ಇರುವಂತಿಲ್ಲ. ಅಲ್ಲದೆ ಸರ್ಕಾರಿ ನೌಕರನ ವಿರುದ್ದ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆ ಪ್ರಾರಂಭವಾಗಿ ಅಂತಹ ಇಲಾಖಾ ವಿಚಾರಣೆ ಅಥವಾ ಕ್ರಿಮಿನಲ್ ಮೊಕದ್ದಮೆ ದಂಡನೆಯಲ್ಲಿ ಪರ್ಯಾವಸಾನಗೊಂಡಿದ್ದಲ್ಲಿ, ಆ ದಂಡನೆಯು ಜಾರಿಯಲ್ಲಿರುವ ಅವಧಿಯಲ್ಲಿ ಅಂತಹ ಸರ್ಕಾರಿ ನೌಕರರಿಗೆ ಮುಂಬಡ್ತಿ ಹೊಂದಲು ಆಸ್ಪದವಿಲ್ಲವೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ. ಪ್ರಥಮ ದರ್ಜೆ ಸಹಾಯಕರ ಹುದ್ದೆಯಿಂದ ಬಿಡುಗಡೆ ಮಾಡುವ ಮುನ್ನ, ಇದನ್ನು ಖಚಿತಪಡಿಸಿಕೊಳ್ಳುವುದು.

*03.* ಸ್ಥಳ ಆಯ್ಕೆ ಪ್ರಕ್ರಿಯೆಯಲ್ಲಿ ಸ್ವತ: ಭಾಗವಹಿಸಿ ಸ್ಥಳ ಆಯ್ಕೆ ಮಾಡಿಕೊಂಡಿರುವುದರಿಂದ, ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ.

*04.* ಈ ಆದೇಶ ಹೊರಡಿಸಿದ 7 ದಿನದೊಳಗೆ ಕರ್ತವ್ಯದಿಂದ ಬಿಡುಗಡೆ ಹೊಂದಿ/ ಸೇರ್ಪಡೆಗೊಳ್ಳುವುದು.

*05.* ಕಛೇರಿ ಮುಖ್ಯಸ್ಥರುಗಳು ಸಂಬಂಧಿಸಿದ ನೌಕರರನ್ನು ಸಕಾಲದಲ್ಲಿ ಕರ್ತವ್ಯದಿಂದ ಬಿಡುಗಡೆಗೊಳಿಸುವುದು.

*06.* ನೌಕರರು ಸ್ಥಳನಿಯುಕ್ತಿಯನ್ನು ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಪಡೆದಿರುವುದರಿಂದ ಯಾವುದೇ ಪ್ರಯಾಣ ಭತ್ಯೆ, ವರ್ಗಾವಣೆ ಭತ್ಯೆ ಅಥವಾ ಸೇರಿಕೆ ಕಾಲಕ್ಕೆ ಅರ್ಹರಿರುವುದಿಲ್ಲ.

*07.* ಈ ಎಲ್ಲಾ ಅಂಶಗಳನ್ನು ಕಛೇರಿ ಮುಖ್ಯಸ್ಥರು ಪರಿಶೀಲಿಸಿ ಸ್ಥಾನಾಪನ್ನ ಬಡ್ತಿ ಬಗ್ಗೆ ಸೇವಾ ಪುಸ್ತಕದಲ್ಲಿ ನಮೂದಿಸಲು ಕ್ರಮ ವಹಿಸಿ ಈ ಕಛೇರಿಗೆ ವರದಿ ಮಾಡತಕ್ಕದ್ದು.

*08.* ನೌಕರರ ಬಿಡುಗಡೆ ಮತ್ತು ಸೇರ್ಪಡೆ ಬಗ್ಗೆ ತಪ್ಪದೆ ಈ ಕಛೇರಿಗೆ ವರದಿ ಸಲ್ಲಿಸುವುದು.

*09.* ಮೇಲಿನ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ಈ ಷರತ್ತುಗಳು ಪೂರೈಕೆ ಆಗದಿದ್ದಂತಹ ನೌಕರರುಗಳನ್ನು ಸ್ಥಾನಾಪನ್ನ ಬಡ್ತಿಗೆ ಪರಿಗಣಿಸಬಾರದೆಂದು ಸ್ಪಷ್ಟಪಡಿಸಿದೆ.

(ಮಾನ್ಯ ಆಯುಕ್ತರ ಆದೇಶದ ಮೇರೆಗೆ)

[ಸಿರಿಯಣ್ಣವರ ಲಲಿತಾ ಚಂದ್ರಶೇಖರ]
ನಿರ್ದೇಶಕರು (ಆಡಳಿತ) (ಹೆ.ಪ್ರ)

<u>ಪ್ರತಿಗಳು:</u>

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
02. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.
03. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
04. ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಸಂಬಂಧಿಸಿದ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ಇವರಿಗೆ ಮುಂದಿನ ಕ್ರಮಕ್ಕಾಗಿ.
05. ಬೆಂಗಳೂರು ಮತ್ತು ಮೈಸೂರು ವಿಭಾಗಗಳ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಇವರ ಮುಖಾಂತರ)
06. ಸಂಬಂಧಿಸಿದ ಶಾಲಾ/ಕಾಲೇಜು/ಕಛೇರಿ ಮುಖ್ಯಸ್ಥರುಗಳಿಗೆ ಮುಂದಿನ ಕ್ರಮಕ್ಕಾಗಿ.
07. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
08. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಆಯುಕ್ತರ ಕಛೇರಿ ರವರು ಈ ಜ್ಞಾಪನವನ್ನು ಇಲಾಖಾ ಅಧಿಕೃತ ವೆಬ್‌ಸೈಟ್ <u>www.schooleducation.kar.nic.in</u> ನಲ್ಲಿ ಪ್ರಕಟಿಸಲು ತಿಳಿಸಿದೆ.
09. ಸಂಬಂಧಿಸಿದ ನೌಕರರುಗಳಿಗೆ. (ಇಲಾಖಾ ವೆಬ್ ಸೈಟ್ ಮೂಲಕ)
10. ಕಛೇರಿ ಪ್ರತಿ.

ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು.**

ಸಂಖ್ಯೆ:ಸಿ5[1] ಅಧೀ.ಬಡ್ತಿ–25/2020–21 ದಿನಾಂಕ: 12–01–2020

**ಜ್ಞಾಪನ**

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಥಮ ದರ್ಜೆ ಸಹಾಯಕರಿಗೆ ಅಧೀಕ್ಷಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿದ್ದು ಬಡ್ತಿ ಮುಂದೂಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ:02–01–2021ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯ ನಡವಳಿ.

2. ಈ ಕಛೇರಿ ಸಮ ಸಂಖ್ಯೆಯ ಅಧಿಸೂಚನೆ ದಿನಾಂಕ: 02/01/2021.

3. ನೌಕರರು ಸಲ್ಲಿಸಿರುವ ಲಿಖಿತ ಮನವಿಗಳು

*****

ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಪ್ರಥಮ ದರ್ಜೆ ಸಹಾಯಕರಿಗೆ ಜ್ಯೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಅಧೀಕ್ಷಕರ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಲು ಉಲ್ಲೇಖ[1]ರ ಇಲಾಖಾ ಮುಂಬಡ್ತಿ ಸಭೆಯಲ್ಲಿ ನಿರ್ಣಯಿಸಲಾದೆ ಹಾಗೂ ಉಲ್ಲೇಖ–2 ರ ಅಧಿಸೂಚನೆಯಂತೆ ಅಧೀಕ್ಷಕರ ಹುದ್ದೆಗೆ ವೇತನ ಶ್ರೇಣಿ ರೂ 37900–70850 ರಲ್ಲಿ ಬಡ್ತಿ ನೀಡಿ ಆದೇಶಿಸಲಾಗಿರುತ್ತದೆ.

ಸದರಿ ಜ್ಞಾಪನದಲ್ಲಿ ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೇಮಕಾತಿ] ನಿಯಮಗಳು–1977ರ ನಿಯಮ 4ಎ ರಂತೆ ಬಡ್ತಿ ನೀಡಲಾದ ನೌಕರರು ಅಂಥ ಬಡ್ತಿಯನ್ನು ಹೊಂದಲು ಇಚ್ಚಿಸದಿದ್ದರೆ, ಉಲ್ಲೇಖ–2ರ ಆದೇಶದ ದಿನಾಂಕದಿಂದ [ಸದರಿ ಆದೇಶದ ಅಧಿಸೂಚನೆಯನ್ನು ಇಲಾಖಾ ವೆಬ್‌ಸೈಟ್ www.schooleducation.kar.in ನಲ್ಲಿ ಪ್ರಕಟಿಸಲಾಗಿದೆ.] 15 ದಿನಗಳ ಒಳಗೆ ನೀಡಲಾದ ಬಡ್ತಿಯನ್ನು ಬಿಟ್ಟುಕೊಡಲು ನೇಮಕ ಪ್ರಾಧಿಕಾರದ ಅನುಮತಿಯನ್ನು ಕೋರಿ ಲಿಖಿತ ಕೋರಿಕೆ ಸಲ್ಲಿಸಲು ದಿನಾಂಕ: 08/01/2021 ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಉಲ್ಲೇಖ–03 ರಂತೆ ಈ ಕೆಳಕಂಡ ನೌಕರರು ಅಧೀಕ್ಷಕರ ಹುದ್ದೆಗೆ ನೀಡಿರುವ ಬಡ್ತಿಯನ್ನು ತಾತ್ಕಾಲಿಕವಾಗಿ ಮುಂದೂಡಲು ಲಿಖಿತ ಮನವಿಯನ್ನು ಸಲ್ಲಿಸಿರುತ್ತಾರೆ.

| ಕ್ರ.ಸಂ | ಪ್ರ.ದ.ಸ ಜ್ಯೇಷ್ಠತಾ ಸಂಖ್ಯೆ | ನೌಕರರ ಹೆಸರು, ಪದನಾಮ ಮತ್ತು ಕಛೇರಿ ವಿಳಾಸ ಶ್ರೀ/ಶ್ರೀಮತಿ |
|---|---|---|
| 1 | 813 | ಜೆ ತಾರಮ್ಮ, ಪ್ರ.ದ.ಸ, ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿ, ದಾವಣಗೆರೆ ದಕ್ಷಿಣ ವಲಯ, ದಾವಣಗೆರೆ ಜಿಲ್ಲೆ. |

ಈ ಮೇಲ್ಕಂಡ ನೌಕರರ ಕೋರಿಕೆಯನ್ನು ಸರ್ಕಾರದ ಅಧಿಸೂಚನೆ ಸಂ:ಡಿಪಿಎಆರ್:57:ಎಸ್‌ಆರ್‌ಆರ್: 2001 ದಿನಾಂಕ:22.05.2002ರಲ್ಲಿ ವಿಷದಪಡಿಸಿರುವಂತೆ, ಕರ್ನಾಟಕ ನಾಗರಿಕ ಸೇವಾ ನಿಯಮ [ಸಾಮಾನ್ಯ ನೇಮಕಾತಿ ನಿಯಮಗಳು] 1977ರಲ್ಲಿನ 4.ಎ ರಂತೆ ಪರಿಗಣಿಸಿ ಸದರಿಯವರಿಗೆ ಒಂದು ವರ್ಷ ಅಥವಾ ಮುಂದೆ ನೀಡುವ ಪದೋನ್ನತಿ ಇದರಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ ಪ್ರಥಮ ದರ್ಜೆ ಸಹಾಯಕರಾಗಿ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಮುಂದುವರೆಯಲು ಅನುಮತಿ ನೀಡಿದೆ.

**(ಮಾನ್ಯ ಆಯುಕ್ತರ ಆದೇಶದ ಮೇರೆಗೆ)**

[ಸಿರಿಯಣ್ಣವರ ಲಲಿತಾ ಚಂದ್ರಶೇಖರ]
ನಿರ್ದೇಶಕರು (ಆಡಳಿತ) (ಹೆ ಪ್ರ)

ಪ್ರತಿಗಳು:

01. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

E:\CS(1) new\Pramotion\2020\SUP-2020\councilling posting memo.doc

02. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.

03. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.

04. ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಸಂಬಂಧಿಸಿದ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ಇವರಿಗೆ ಮುಂದಿನ ಕ್ರಮಕ್ಕಾಗಿ.

05. ಬೆಂಗಳೂರು ಮತ್ತು ಮೈಸೂರು ವಿಭಾಗಗಳ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು (ಆಡಳಿತ) ಇವರ ಮುಖಾಂತರ)

06. ಸಂಬಂಧಿಸಿದ ಶಾಲಾ/ಕಾಲೇಜು/ಕಛೇರಿ ಮುಖ್ಯಸ್ಥರುಗಳಿಗೆ ಮುಂದಿನ ಕ್ರಮಕ್ಕಾಗಿ.

07. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.

08. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ, ಆಯುಕ್ತರ ಕಛೇರಿ ರವರು ಈ ಜ್ಞಾಪನವನ್ನು ಇಲಾಖಾ ಅಧಿಕೃತ ವೆಬ್‌ಸೈಟ್ www.schooleducation.kar.nic.in ನಲ್ಲಿ ಪ್ರಕಟಿಸಲು ತಿಳಿಸಿದೆ.

09. ಸಂಬಂಧಿಸಿದ ನೌಕರರುಗಳಿಗೆ. (ಇಲಾಖಾ ವೆಬ್ ಸೈಟ್ ಮೂಲಕ)

10. ಕಛೇರಿ ಪ್ರತಿ.